**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/09/ಐಎನ್‌ಎಸ್(3)/2017

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು–560001
ದಿನಾಂಕ: 13.09.2017

**ಜ್ಞಾಪನ**

ವಿಷಯ: ಏಪ್ರಿಲ್–ಮೇ 2017 ರ ಡಿಪ್ಲೋಮಾ ಪರೀಕ್ಷೆಯ ವಿಷಯವಾರು ಫಲಿತಾಂಶದ ವಿಶ್ಲೇಷಣೆಯ ಬಗ್ಗೆ.

ಉಲ್ಲೇಖ: ತಾಂತ್ರಿಕ ಪರೀಕ್ಷಾ ಮಂಡಳಿಯ 166ನೇ ಕೇಂದ್ರ ಸಭೆಯ ನಡಾವಳಿಗಳು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿಯ 166 ನೇ ಕೇಂದ್ರ ಸಭೆಯಲ್ಲಿ ಏಪ್ರಿಲ್–ಮೇ 2017 ರ ಡಿಪ್ಲೋಮಾ ಪರೀಕ್ಷಾ ಫಲಿತಾಂಶವನ್ನು ಅವಲೋಕಿಸಿದಾಗ, ಹಲವಾರು ಥಿಯರಿ ವಿಷಯ ಗಳಲ್ಲಿ ಶೇಕಡ 50ಕ್ಕಿಂತಲೂ ಕಡಿಮೆ ಫಲಿತಾಂಶ ಬಂದಿರುವುದು ಕಂಡುಬಂದಿರುತ್ತದೆ.

ಈ ಹಿನ್ನಲೆಯಲ್ಲಿ ಶೇಕಡ 50ಕ್ಕಿಂತಲೂ ಕಡಿಮೆ ಫಲಿತಾಂಶ ಬಂದಿರುವ ಥಿಯರಿ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು, ನಿರ್ದೇಶನಾಲಯದ ವೆಬ್ ಸೈಟ್ www.dte.kar.nic.in ನಲ್ಲಿ 'APRIL-MAY 2017 RESULT ANALYSIS' ಶೀರ್ಷಿಕೆಯಡಿಯಲ್ಲಿ ಒದಗಿಸಲಾಗಿರುವ ಲಿಂಕ್‌ನ್ನು ಬಳಸಿಕೊಂಡು ಕೋರಿರುವ ಎಲ್ಲಾ ಮಾಹಿತಿಗಳನ್ನು ದಾಖಲಿಸಿ, ದಿನಾಂಕ 28–09–2017ರೊಳಗಾಗಿ ಅಪ್ ಲೋಡ್ ಮಾಡಲು ಮತ್ತು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಕೋರಿರುವ ಮಾಹಿತಿಯ ಹಾರ್ಡ್‌ಕಾಪಿಯನ್ನು ಜಂಟಿ ನಿರ್ದೇಶಕರು (ತನಿಖೆ), ಇವರಿಗೆ ಕಳುಹಿಸಲು ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ಆದೇಶಿಸಲಾಗಿದೆ.

**ನಿರ್ದೇಶಕರು**

14/9/17

**ಪ್ರತಿ:**

1. ಜಂಟಿ ನಿರ್ದೇಶಕರು (ಆಡಳಿತ/ಪರೀಕ್ಷೆ/ಸಿಡಿಸಿ/ಡಿವಿಪಿ/ತನಿಖೆ)
2. ನಿರ್ದೇಶಕರ ಆಪ್ತ ಶಾಖೆ.
3. ಈ–ಗವರ್ನನ್ಸ್ ಸಂಯೋಜಕರಿಗೆ, ನಿರ್ದೇಶನಾಲಯದ ಅಂತರ್ಜಾಲದಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.

# ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ವಿಷಯವಾರು (ಥಿಯರಿ) ಫಲಿತಾಂಶ ವಿಶ್ಲೇಷಣಾ ನಮೂನೆ

**ಪಾಲಿಟೆಕ್ನಿಕ್‌ನ ಹೆಸರು:** **ಸಂಸ್ಥೆಯ ಕೋಡ್:**

**ಪರೀಕ್ಷೆ : ಏಪ್ರಿಲ್–ಮೇ 2017**

| ಕ್ರ ಸಂ. | ಸೆಮಿಸ್ಟರ್ | ವಿಭಾಗ | ವಿಷಯ | ವಿಷಯ ಸಂಕೇತ | ಫಲಿತಾಂಶ | | | | ವಿಷಯವನ್ನು ಬೋಧಿಸಿರುವ ಉಪನ್ಯಾಸಕರ ಹೆಸರು | ಪದನಾಮ | ಸಹಿ | ಷರಾ |
|---|---|---|---|---|---|---|---|---|---|---|---|---|
| | | | | | ರೆಗ್ಯುಲರ್ ಅಭ್ಯರ್ಥಿಗಳು | | | | | | | |
| | | | | | ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ | ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ | ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ | ಫಲಿತಾಂಶ % | | | | |
| 1. | | | | | | | | | | | | |
| 2. | | | | | | | | | | | | |
| 3. | | | | | | | | | | | | |

**ವಿಭಾಗಾಧಿಕಾರಿ ಸಹಿ** **ಪ್ರಾಂಶುಪಾಲರ ಸಹಿ**

# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/09/ಐಎನ್ಎಸ್(3)/2017

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ: 14.09.2017

## ಸುತ್ತೋಲೆ

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಬರುವ ಸರ್ಕಾರಿ / ಅನುದಾನಿತ ಹಾಗೂ ಅನುದಾನರಹಿತ ಪಾಲಿಟೆಕ್ನಿಕ್‌ಗಳಲ್ಲಿ ಶೈಕ್ಷಣಿಕ ಗುಣಮಟ್ಟ ಹಾಗೂ ಪರೀಕ್ಷಾ ಫಲಿತಾಂಶಗಳನ್ನು ಉತ್ತಮಪಡಿಸುವ ಸಲುವಾಗಿ ಎಂಟು ಮಾರ್ಗ ಸೂಚಿಗಳನ್ನು ಜಾರಿಗೆ ತರಬೇಕೆಂಬ ಆದೇಶದ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 190 ಟಿಪಿಇ 2011, ದಿನಾಂಕ: 13.03.2012

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ರಾಜ್ಯದ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಬರುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳು ನಡೆಸುತ್ತಿರುವ ಡಿಪ್ಲೊಮೋ ಕೋರ್ಸುಗಳ ಶಿಕ್ಷಣ ಗುಣಮಟ್ಟ ಹಾಗೂ ಪರೀಕ್ಷಾ ಫಲಿತಾಂಶಗಳನ್ನು ಉತ್ತಮಗೊಳಿಸಲು ಮಾರ್ಗಸೂಚಿಗಳನ್ನು ಸೂಚಿಸಿದ್ದು, ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸಿ, ತೆಗೆದುಕೊಂಡ ಕ್ರಮಗಳ ಬಗ್ಗೆ ತುರ್ತಾಗಿ ವರದಿಯನ್ನು ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

1. ಪಾಲಿಟೆಕ್ನಿಕ್‌ನ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಉಪನ್ಯಾಸಕರ ಸಮಿತಿಯನ್ನು ರಚಿಸಿ, ಪ್ರತಿ ತಿಂಗಳಿಗೊಮ್ಮೆ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆ ಹಾಗೂ ಕಿರುಪರೀಕ್ಷೆಗಳ ಫಲಿತಾಂಶಗಳ ಬಗ್ಗೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟದ ಬಗ್ಗೆ ಅವಲೋಕನ ಮಾಡಿ ಸಂಬಂಧಪಟ್ಟ ಉಪನ್ಯಾಸಕರಿಂದ ವರದಿಯನ್ನು ಪಡೆಯುವುದು ಹಾಗೂ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನು ಪಡೆಯಲು ಮಾರ್ಗದರ್ಶನವನ್ನು ನೀಡುವುದು.
2. ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ವಿಶೇಷ ತರಗತಿಗಳು (Remedial Classes) ಹಾಗೂ ಸಂವಹನ ಕಾರ್ಯಕ್ರಮಗಳನ್ನು (Counselling) ಏರ್ಪಡಿಸಿ, ಫಲಿತಾಂಶವನ್ನು ಉತ್ತಮಪಡಿಸಲು ಸಂಬಂಧಪಟ್ಟ ಉಪನ್ಯಾಸಕರು ಹಾಗೂ ಪ್ರಾಂಶುಪಾಲರುಗಳು ಕ್ರಮವಹಿಸತಕ್ಕದ್ದು.
3. ಪ್ರತೀ ಉಪನ್ಯಾಸಕರು ತಾವು ಬೋಧಿಸುವ ವಿಷಯಗಳಲ್ಲಿ ಕನಿಷ್ಠ ಶೇಕಡಾ 50 ರಷ್ಟು ಫಲಿತಾಂಶ ಬರುವಂತೆ ನೋಡಿಕೊಳ್ಳುವುದು.
4. ಮೇಲ್ಕಂಡ ಸೂಚನೆಗಳನ್ನು ಪಾಲಿಸದ ಉಪನ್ಯಾಸಕರುಗಳ ವರದಿಯನ್ನು ಪ್ರಾಂಶುಪಾಲರು ತಪ್ಪದೇ ನಿರ್ದೇಶನಾಲಯಕ್ಕೆ ವರದಿ ನೀಡಿ, ತತ್ಸಂಬಂಧ ದಾಖಲೆಗಳನ್ನು ಸಲ್ಲಿಸುವುದು.
5. ಪ್ರತೀ ಉಪನ್ಯಾಸಕರ/ಉಪನ್ಯಾಸಕಿಯರ/ಬೋಧಕರ ಕಾರ್ಯಕ್ಷಮತೆ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಉತ್ತಮ ಫಲಿತಾಂಶ ಬರುವಂತೆ ನೋಡಿಕೊಳ್ಳುವ ಜವಾಬ್ದಾರಿಯು ಸಂಸ್ಥೆಯ ಪ್ರಾಂಶುಪಾಲರದಾಗಿದ್ದು, ಶೇಕಡಾ 50ರಷ್ಟು ಫಲಿತಾಂಶಕ್ಕಿಂತ ಕಡಿಮೆ ಫಲಿತಾಂಶ ಬಂದಲ್ಲಿ, ಆಯಾ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರೇ ನೇರವಾಗಿ ಹೊಣೆಗಾರರಾಗಿರುತ್ತಾರೆ.
6. ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಶೇಕಡಾ 50ಕ್ಕಿಂತ ಕಡಿಮೆ ಫಲಿತಾಂಶ ಬಂದಲ್ಲಿ, ಆಯಾ ವಿಭಾಗಗಳ ವೇತನಾನುದಾನವನ್ನು ತಡೆಹಿಡಿಯುವುದು.
7. ಪಾಠಪ್ರವಚನಗಳನ್ನು ನಿಗದಿಪಡಿಸಿದ ಅವಧಿಯೊಳಗೆ ಪೂರ್ಣಗೊಳಿಸುವುದು. ಕಾರಣಾಂತರಗಳಿಂದ ನಿಗದಿಪಡಿಸಿದ ಅವಧಿಯೊಳಗೆ ಪಾಠಪ್ರವಚನಗಳನ್ನು ಪೂರ್ಣವಾಗಿ ಮುಗಿಸದಿದ್ದಲ್ಲಿ ವಿಶೇಷ ತರಗತಿಗಳನ್ನು ತೆಗೆದುಕೊಂಡು ನಿಗದಿತ ಅವಧಿಯೊಳಗೆ ಮುಗಿಸತಕ್ಕದ್ದು.
8. ಮೇಲ್ಕಂಡ ಸೂಚನೆಗಳನ್ನು ಪಾಲಿಸದೇ ವೈಫಲ್ಯತೆಯನ್ನು ಅನುಭವಿಸಿದ ಪಕ್ಷದಲ್ಲಿ, ಸಂಬಂಧಪಟ್ಟವರ ಮೇಲೆ ಶಿಸ್ತುಕ್ರಮ ಜರುಗಿಸಿ, ವಾರ್ಷಿಕ ವೇತನ ಬಡ್ತಿ ಹಾಗೂ ಮುಂಬಡ್ತಿಯನ್ನು ತಡೆಹಿಡಿಯುವುದು ಹಾಗೂ ಸಂಬಂಧಪಟ್ಟ ಸಿಬ್ಬಂದಿಯವರ ಪ್ರಗತಿ ವರದಿಯನ್ನು ಸದರಿಯವರ ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿ ನಮೂದಿಸುವುದು.

........2

ಶೈಕ್ಷಣಿಕ ಗುಣಮಟ್ಟ ಹಾಗೂ ಫಲಿತಾಂಶಗಳನ್ನು ಉತ್ತಮಪಡಿಸಲು 08 ಮಾರ್ಗಸೂಚಿಗಳನ್ನು ಜಾರಿಗೊಳಿಸಲು ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿತ್ತು. ಏಪ್ರಿಲ್-ಮೇ 2017ರ ಡಿಪ್ಲೋಮಾ ಪರೀಕ್ಷೆಯ ವಿಷಯವಾರು ಫಲಿತಾಂಶವನ್ನು ಪರಿಶೀಲಿಸಿದಾಗ, ಬಹುತೇಕ ಪಾಲಿಟೆಕ್ನಿಕ್‌ಗಳಲ್ಲಿ ಹಲವಾರು ವಿಷಯಗಳಲ್ಲಿ ಫಲಿತಾಂಶವು ಕಡಿಮೆ ಪ್ರಮಾಣದಲ್ಲಿರುವುದು ನಿರ್ದೇಶನಾಲಯದ ಗಮನಕ್ಕೆ ಬಂದಿದ್ದು, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ.

ಪ್ರಸ್ತುತ ಚಾಲ್ತಿಯಲ್ಲಿರುವ C-15 ಪಠ್ಯಕ್ರಮಕ್ಕೆ ಅನುಗುಣವಾಗಿ ಪರಿವೀಕ್ಷಣಾ ವಿಭಾಗದಿಂದ ಪ್ರಚುರ ಪಡಿಸಿರುವ **ಅನುಬಂಧ-1, 2ಮತ್ತು 3** ರಲ್ಲಿ ತಿಳಿಸಿರುವ ಶೈಕ್ಷಣಿಕ ದಾಖಲೆಗಳನ್ನು ಹಾಗೂ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಪಟ್ಟಂತೆ **ಅನುಬಂಧ- 4** ರಲ್ಲಿ ತಿಳಿಸಿರುವ ದಾಖಲೆಗಳನ್ನು ನಿರ್ವಹಿಸಲು ಸೂಚಿಸಲಾಗಿದೆ.

ತಾಂತ್ರಿಕ ಪರೀಕ್ಷಾ ಮಂಡಳಿಯ 166ನೇ ಸಭೆಯಲ್ಲಿ ಏಪ್ರಿಲ್-ಮೇ 2017ರ ಚಾಲ್ತಿಯಲ್ಲಿರುವ C-15 ಪಠ್ಯಕ್ರಮದ ಡಿಪ್ಲೋಮಾ ಪರೀಕ್ಷಾ ಫಲಿತಾಂಶವನ್ನು ಅವಲೋಕಿಸಿದಾಗ ರಾಜ್ಯ ಮಟ್ಟದಲ್ಲಿ ಈ ಕೆಳಕಂಡ ವಿಷಯಗಳಲ್ಲಿ ಶೇಕಡಾ 50ಕ್ಕಿಂತಲೂ ಕಡಿಮೆ ಫಲಿತಾಂಶ ಬಂದಿರುವುದು ಕಂಡುಬಂದಿರುತ್ತದೆ.

| Sl. No. | Sub. Code | Sub. Name | % of Pass in APRIL-MAY 2017 |
|---|---|---|---|
| 1. | 15EE21T | ELECTRICAL CIRCUITS | 45.48 |
| 2. | 15SC02M | ENGG. MATHS-II | 32.30 |
| 3. | 15SC03S | APPLIED SCIENCE | 43.21 |
| 4. | 15MN21T | MINE CONSTRN & DEVLP | 41.21 |
| 5. | 15MM21T | BUSINESS MATHEMATICS | 6.12 |

ಏಪ್ರಿಲ್-ಮೇ 2017ರ ಡಿಪ್ಲೋಮಾ ಪರೀಕ್ಷೆಯಲ್ಲಿ ಮೇಲ್ಕಂಡ ವಿಷಯಗಳಲ್ಲಿ ಹಾಗೂ ತಮ್ಮ ಸಂಸ್ಥೆಯಲ್ಲಿ ಶೇಕಡಾ 50ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ವಿಷಯಗಳಲ್ಲಿ, ಮೇಲ್ಕಾಣಿಸಿದ 08 ಅಂಶಗಳನ್ನು ಅಳವಡಿಸಲು ಪ್ರಾಂಶುಪಾಲರು ಅಗತ್ಯ ಕ್ರಮ ಕೈಗೊಂಡಿರುವುದರ ಬಗ್ಗೆ ಸಂಪೂರ್ಣ ವರದಿಯನ್ನು ಇ-ಮೇಲ್ ಮುಖಾಂತರ jdins.2014@gmail.com ಗೆ, ಮೂಲ ಪ್ರತಿಯನ್ನು ಜಂಟಿ ನಿರ್ದೇಶಕರು (ತನಿಖೆ) ಇವರಿಗೆ ಪತ್ರ ತಲುಪಿದ 10 ದಿನಗಳೊಳಗಾಗಿ ಕಡ್ಡಾಯವಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು

14/9/17.

**ಇವರಿಗೆ,**

ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

**ಪ್ರತಿ:**

1. ಜಂಟಿ ನಿರ್ದೇಶಕರು (ಆಡಳಿತ/ಪರೀಕ್ಷೆ/ಸಿಡಿಸಿ/ತನಿಖೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ನಿರ್ದೇಶಕರ ಆಪ್ತಶಾಖೆ.
3. ಇ-ಗವರ್ನನ್ಸ್ ಸಂಯೋಜಕರಿಗೆ, ನಿರ್ದೇಶನಾಲಯದ ಅಂತರ್ಜಾಲದಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.